(ಸಾಕ್ಷಿಯನ್ನು ದಿಃ 14-11-2019 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟಿ ಸವಾಲಿಗೆ ಒಳಪಡಿಸಲಾಯಿತು. )

**ಪಾಟಿ ಸವಾಲುಃ ಪ್ರತಿವಾದಿ ಪರವಾಗಿಃ ಶ್ರೀ ಜಿ ಎಫ್ ಎನ್ ವಕೀಲರಿಂದಃ**

ನಾನು ಕಳೆದ 18 ವರ್ಷಗಳಿಂದ ಕಾರವಾರದಲ್ಲಿ ನೋಟರಿಯಾಗಿ ಕೆಲಸ ಮಾಡುತ್ತೀದ್ದೆನೆ. ನನ್ನ ನೋಟರಿ ಕಚೇರಿಗೆ ಸದಾಶಿವಗಡ, ಮಾಜಾಳಿ,ಹಣಕೂಣ ಮತ್ತು ಕಾರವಾರದಿಂದ ಜನರು ನೋಟರಿ ಕೆಲಸಕ್ಕೆ ಬರುತ್ತಾರೆ ಎಂದರೆ ನಿಜ. ನಾನು ನನ್ನ ನೋಟರಿ ಕಚೇರಿಯನ್ನು ಬೆಳಿಗ್ಗೆ 10 ಗಂಟೆಗೆ ತೆರೆಯುತ್ತೇನೆ. ನನ್ನ ನೋಟರಿ ಕಚೇರಿಯಲ್ಲಿ ಇಬ್ಬರು ಸಿಬ್ಬಂದಿಗಳು ಇರುತ್ತಾರೆ. ನನಗೆ ತುಂಬಾ ಪಕ್ಷಗಾರರು ಮತ್ತು ಕಕ್ಷಿದಾರರು ಇರುತ್ತಾರೆ ಎಂದರೆ ಸರಿಯಲ್ಲ, ಆದರೆ ಸ್ವಲ್ಪ ಜನ ಇರುತ್ತಾರೆ. ಜನರು ತಮ್ಮ ಕೆಲಸಗಳಿಗಾಗಿ ಸ್ಟಾಂಪ್ ಪೇಪರ ಮತ್ತು ಬಾಂಡ್ ಪೇಪರನ್ನು ತಾವಾಗಿಯೇ ತರುತ್ತಾರೆ. ನಾನು ಜನರ ಆಧಾರ ಕಾರ್ಡ, ಪಾನ್ ಕಾರ್ಡ ಮತ್ತು ಇತರೇ ಗುರುತಿನ ಚೀಟಿಗಳನ್ನು ತೆಗೆದುಕೊಳ್ಳುತ್ತೇನೆ ಎಂದರೆ ಸಾಕ್ಷಿಯು ಖಾತ್ರಿ ಪಡಿಸುವ ಸಲುವಾಗಿ ತೆಗೆದುಕೊಂಡು ಪರಿಶೀಲಿಸುತ್ತೇನೆ ಎಂದು ನುಡಿದಿರುತ್ತಾರೆ. ನಂತರ ಖಾತ್ರಿಯಾದ ಬಳಿಕ ಪಕ್ಷಗಾರರ ಸಹಿಗಳನ್ನು ನೋಟರಿ ರಜಿಸ್ಟರ್ ಗೆ ಪಡೆದುಕೊಳ್ಳುತ್ತೇನೆ ಎಂದರೆ ನಿಜ.

ನಿಪಿ-8 ರ ಬಾಂಡ್ ಪೇಪರನ್ನು ವಾದಿ ಮತ್ತು ಪ್ರತಿವಾದಿಯೇ ತಂದಿದ್ದರು. ಆ ದಿನ ದಿಃ 11-4-2012 ರಂದು ವಾದಿ ಮತ್ತು ಪ್ರತಿವಾದಿ ನಮ್ಮ ನೋಟರಿ ಕಚೇರಿಗೆ ಬೆಳಿಗ್ಗೆ 11-30 ರಿಂದ 12 ಗಂಟೆ ಸಮಯದಲ್ಲಿ ಬಂದಿರುತ್ತಾರೆ. ವಾದಿ ಮತ್ತು ಪ್ರತಿವಾದಿ ಮೊದಲು ನಮ್ಮ ಕಚೇರಿಗೆ ಬಂದು ಕರಾರು ಪತ್ರ ಮಾಡಿಕೊಡಬೇಕೆಂದು ಕೇಳಿಕೊಂಡರು. ನಂತರ ಮಧ್ಯಾಹ್ನ 12 ಗಂಟೆ ಸಮಯಕ್ಕೆ ವಾದಿ ಮತ್ತು ಪ್ರತಿವಾದಿಗಳು ಬಾಂಡ ಪೇಪರನ್ನು ತಂದರು. ನಾನು ವಾದಿ ಮತ್ತು ಪ್ರತಿವಾದಿಗೆ ಆಧಾರ ಕಾರ್ಡ ಕೊಡಿ ಎಂದು ಕೇಳಿದೆನು. ನಿಪಿ-8 ರ ಕರಾರು ಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಯ ಆಧಾರ ಕಾರ್ಡ ನಂಬರನ್ನು ಹಾಕಿರುವುದಿಲ್ಲ ಎಂದರೆ ನಿಜ. ನಾನು ಸಾಮಾನ್ಯವಾಗಿ ಜನರ ಬಾವಚಿತ್ರಗಳನ್ನು ತೆಗೆದುಕೊಳ್ಳುವುದಿಲ್ಲ. ಆಧಾರ ಕಾರ್ಡಗಳಲ್ಲಿ ಪಕ್ಷಗಾರರ ಗುರುತನ್ನು ಹಚ್ಚಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಿಪ-8 ರ ಕರಾರು ಪತ್ರವು ಚಿತ್ತಾಕುಲಾದಲ್ಲಿರುವ ಜಮೀನು ಮಾರಾಟ ಮಾಡುವ ಸಲುವಾಗಿ ಆಗಿರುತ್ತದೆ. ಸದರಿ ಕರಾರು ಪತ್ರವು ಒಟ್ಟೂ ಐದುವರೆ ಲಕ್ಷಕ್ಕೆ ಆಗಿರುತ್ತದೆ. ನನ್ನ ಮುಂದೆ ಹಣದ ವ್ಯವಹಾರ ಆಗಿರುವುದಿಲ್ಲ. ಆದರೆ ವಾದಿಯು ನನ್ನಮುಂದೆ ಪ್ರತಿವಾದಿಗೆ ಮೊದಲೇ 3 ಲಕ್ಷ

ಮುಂಗಡ ಹಣವನ್ನು ಕೊಟ್ಟಿದ್ದೇನೆ ಎಂದು ಹೇಳಿದ್ದರು. ಉಳಿದ ಎರಡುವರೆ ಲಕ್ಷ ಹಣವನ್ನು 6 ತಿಂಗಳೊಳಗೆ ಕೊಡಬೇಕೆಂದು ಶರತ್ತು ಆಗಿತ್ತು.

ಪ್ರತಿವಾದಿಯು ದಿಃ 11-4-2012 ರಂದು ನನ್ನ ನೋಟರಿ ಕಚೇರಿಗೆ ಬಂದಿಲ್ಲ ಎಂದರೆ ಸರಿಯಲ್ಲ. ದಿಃ 11-4-2012 ರಂದು ಪ್ರತಿವಾದಿಯು ಬಾಂಬೆಯಲ್ಲಿ ಕೊಲಬಾ ಎಂಬ ಸ್ಥಳದಲ್ಲಿ ಇದ್ದರು ಎಂದರೆ ಸರಿಯಲ್ಲ. ವಾದಿಯು ಬೇರೆ ವ್ಯಕ್ತಿಯನ್ನು ಕರೆತಂದು ನಿಪಿ-8 ರ ಕರಾರು ಪತ್ರವನ್ನು ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ನಾನು ವಾದಿ ಮತ್ತು ಪ್ರತಿವಾದಿಯ ಪಾಸ್ ಪೋರ್ಟ ಅಳತೆಯ ಬಾವಚಿತ್ರಗಳನ್ನು ತೆಗೆದುಕೊಳ್ಳಬೇಕಾಗಿತ್ತು ಎಂದರೆ ಸರಿಯಲ್ಲ. ಸದರಿ ಬಾವ ಚಿತ್ರಗಳನ್ನು ನಿಪಿ-8 ರ ಕರಾರು ಪತ್ರದ ಮೇಲೆ ಅಂಟಿಸಬೇಕಾಗಿತ್ತು ಎಂದರೆ ಸರಿಯಲ್ಲ. ಆದಕಾರಣ ನಿಪಿ-8 ರ ಕರಾರು ಪತ್ರವು ಕಾನೂನುಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ 3 ಲಕ್ಷ ಮುಂಗಡ ಹಣ ತಲುಪಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.